

ದರ್ಶನ್



ಉಮಾಪತಿ



ಪುಷ್ಕರ್

# ಗಂಟೆ ಕಟ್ಟುವವರು ಯಾರು?

ಕೊರೊನಾ ಲಾಕ್‌ಡೌನ್‌ನಿಂದಾಗಿ ಚಿತ್ರರಂಗದ ಚಟುವಟಿಕೆಗಳಿಗಷ್ಟೇ ಅಲ್ಲ, ವಿವಾದಗಳಿಗೂ ಕೊಂಚ ಬ್ರೇಕ್ ಬಿದ್ದಂತಿತ್ತು. ಆದರೆ ಲಾಕ್‌ಡೌನ್ ತೆರವು ಆಗುತ್ತಿರುವ ಹಾಗೆಯೇ ಸಿನಿಮಾ ಕೆಲಸಗಳು ಎಷ್ಟರ ಮಟ್ಟಿಗೆ ಗರಿಗೆದರಿವೆಯೋ ಗೊತ್ತಿಲ್ಲ, ವಿವಾದಗಳಂತೂ ಜೋರಾಗಿಯೇ ಸದ್ದು ಮಾಡುತ್ತಿವೆ.

ರಕ್ಷಿತ್ ಶೆಟ್ಟಿಗೆ ಸಂಬಂಧಿಸಿದ ವಿವಾದ ಒಂದೆಡೆಯಾದರೆ, ದರ್ಶನ್ ಹೆಸರಲ್ಲಿ ಕೋಟ್ಯಂತರ ರೂಪಾಯಿ ಹಣ ವಂಚನೆಗೆ ಯತ್ನಿಸಿರುವ ವಿವಾದ ಇನ್ನೊಂದೆಡೆ. ಎರಡೂ ವಿವಾದಗಳಲ್ಲಿಯೂ ನಟರು ಖಡಕ್ ಆಗಿ ಮಾತಾಡಿದ್ದಾರೆ. ಆದರೆ ನೈಜ ಸಂಗತಿ ಏನು ಎನ್ನುವುದು ಪೂರ್ತಿಯಾಗಿ ಹೊರಗೆ ಬಂದಿಲ್ಲ.ಹಾಗೆ ನೋಡಿದರೆ ಎರಡೂ ವಿವಾದಗಳೂ ಈಗ ಮುಗಿದಂತಿವೆ. 'ಇಂಥ ವಿಷಯ ಇಟ್ಟುಕೊಂಡು ಪತ್ರಿಕಾಗೋಷ್ಠಿ ಕರೆಯಲಾರೆ. ನನ್ನ ಕೆಲಸವೇ ಮಾತಾಡುತ್ತದೆ' ಎಂದು ರಕ್ಷಿತ್ ಶೆಟ್ಟಿ ಹೇಳಿದ್ದರೆ, 'ರೆಕ್ಕೆಯನ್ನಲ್ಲ, ತಲೆಯನ್ನೇ ತೆಗೆಯುತ್ತೇನೆ' ಎಂದು ಗರ್ಜಿಸಿದ್ದ ದರ್ಶನ್ ಕೂಡ ರೆಕ್ಕೆ ಮುದುರಿಕೊಂಡು ಉಮಾಪತಿ ಗೌಡರ ಹೆಗಲ ಮೇಲೆ ಕೈಹಾಕಿ ನಾವು ನಾವು ಮಾತಾಡಿಕೊಳ್ಳುತ್ತೇವೆ ಎಂದು ಹೇಳಿದ್ದಾರೆ. ಆದರೆ ಈಗ ಕಾಣಿಸುತ್ತಿರುವುದು ಹಿಮಗಡ್ಡೆಯ ತುದಿಯ ಚೂರು ಮಾತ್ರ, ಅದರ ಇಡೀ ಶರೀರ ನೀರಿನೊಳಗಿದೆ ಎಂದು ಗೊತ್ತಿದ್ದವರಿಗೆ ಇದ್ಯಾವುದೂ ಇಲ್ಲಿಗೆ ಮುಗಿಯುವುದಿಲ್ಲ ಎಂದು ಗೊತ್ತಿರುತ್ತದೆ.

ಎರಡೂ ವಿವಾದಗಳಲ್ಲಿ ಆರೋಪ ಪ್ರತ್ಯಾರೋಪದ ತುದಿಗಳಲ್ಲಿ ಇದ್ದವರು ಚಿತ್ರರಂಗಕ್ಕೆ ಚಿರಪರಿಚಿತರೇ. ಮತ್ತು ಇಲ್ಲಿ ವಿವಾದದ ಮೂಲ ಹುಡುಕಿಕೊಂಡು ಹೋದರೆ ಎರಡರಲ್ಲಿಯೂ ಸಾಮಾನ್ಯವಾಗಿ ಕಾಣುವುದು ಹಣ. ವೈಯಕ್ತಿಕ ದ್ವೇಷ, ಮುಳುಗುವ ಚಿಂತೆ, ತೇಜೋವಧೆ, ವಂಚನೆ, ಈ ಎಲ್ಲವುಗಳ ಜೊತೆಗೆ ಕನ್ನಡ ಚಿತ್ರರಂಗದಲ್ಲಿನ ವೃತ್ತಿಪರತೆಯ ಕೊರತೆಯ ಕುರಿತೂ ಈ ವಿವಾದಗಳು ಬೊಟ್ಟು ಮಾಡುತ್ತಿವೆ.

ಕನ್ನಡ ಚಿತ್ರರಂಗದಲ್ಲಿ ಸ್ಟಾರ್ ನಟರಿಂದ ಹಿಡಿದು ಲೈಟ್‌ಬಾಯ್‌ವರೆಗೆ ಕೆಲಸಮಾಡಿದವರಿಗೆ ಗೌರವಯುತವಾಗಿ ಮತ್ತು ಸರಿಯಾದ ಸಮಯಕ್ಕೆ ಸಂಭಾವನೆ ಸಿಗುವುದು ಮರೀಚಿಕೆಯೇ ಎಂಬುದು ಹೊಸ ಸಂಗತಿಯೇನಲ್ಲ. ಹಿರಿಯ ನಟ ಅಂಬರೀಷ್ ಅವರ ಮನೆಯಲ್ಲಿ ಲಕ್ಷಾಂತರ ರೂಪಾಯಿ ಮೌಲ್ಯದ ಬೌನ್ಸ್ಡ್ ಚೆಕ್‌ಗಳಿದ್ದವಂತೆ. ಆದರೆ ಸ್ಟಾರ್ ನಟರಿಗೆ ಇಂಥ ವಂಚನೆಗಳನ್ನು ತಡೆದುಕೊಳ್ಳುವ ಶಕ್ತಿ ಇರುತ್ತದೆ. ಯಾಕೆಂದರೆ ಅವರ ಸಂಭಾವನೆಯೇ ಕೋಟಿಗಳ ಲೆಕ್ಕದಲ್ಲಿರುತ್ತದೆ. ಆದರೆ ದಿನಗೂಲಿ ಪಡೆದು ಕೆಲಸಮಾಡುವ ಸಾವಿರಾರು ಕಾರ್ಮಿಕರು ಚಿತ್ರರಂಗದಲ್ಲಿದ್ದಾರೆ. ಅವರಿಗೆ ಸಲ್ಲಬೇಕಾದ ಹಣ ಕಾಲಕಾಲಕ್ಕೆ ಸಲ್ಲದಿದ್ದರೆ ಜೀವನನಿರ್ವಹಣೆಯೇ ಕಷ್ಟವಾಗುತ್ತದೆ.



ರಕ್ಷಿತ್ ಶೆಟ್ಟಿ

ಚಿತ್ರರಂಗಕ್ಕೆ ಈ ಸಂಭಾವನೆ ಪಾವತಿಯ ಬಗ್ಗೆ ಅಂಟಿಕೊಂಡಿರುವ ಕಳಂಕಕ್ಕೆ ವೃತ್ತಿಪರತೆಯ ಕೊರತೆಯೇ ಕಾರಣ. ಎಲ್ಲಿಂದಲಾದರೂ ಹೇಗಾದರೂ ಹಣ ಹೊಂದಿಸಿದರಾಯ್ತು ಎಂಬ ಆಲೋಚನೆಯಲ್ಲಿ ತಂದ ಹಣದ ಬಡ್ಡಿ, ಚಕ್ರಬಡ್ಡಿಗಳು ಕುತ್ತಿಗೆಗೆ ಸುತ್ತಿಕೊಂಡ ಉದಾಹರಣೆಗಳೂ ಇಲ್ಲಿ ಬೇಕಾದಷ್ಟಿವೆ. ಹೀಗೆ ಹಣವನ್ನು ಬಡ್ಡಿಗೆ ಬಿಟ್ಟು ಬಡ್ಡಿಹಣದಲ್ಲಿಯೇ ಸಂಪತ್ತನ್ನು ದ್ವಿಗುಣಗೊಳಿಸಿಕೊಂಡ ದೊಡ್ಡ ದೊಡ್ಡ ನಿರ್ಮಾಪಕರೂ ಇದ್ದಾರೆ.

ಚಿತ್ರಗಳ ಹೂರಣದ ಗುಣಮಟ್ಟ, ಅದು ಬೇರೆ ಭಾಷೆಯ ಸಿನಿಮಾಗಳೊಟ್ಟಿಗೆ ಸ್ಪರ್ಧೆಗೆ ನಿಲ್ಲಬೇಕಾದ ಅಗತ್ಯ, ತಾಂತ್ರಿಕ ಗಟ್ಟಿತನಗಳ ಬಗ್ಗೆ ಚರ್ಚೆ ಮಾಡುವಲ್ಲಿ ಇರುವ ಉತ್ಸಾಹ ಚಿತ್ರನಿರ್ಮಾಣದ ಪ್ರಕ್ರಿಯೆಯಲ್ಲಿ ವೃತ್ತಿಪರತೆಯನ್ನು ತರುವುದು ಹೇಗೆ ಎಂಬ ಕುರಿತು ಚರ್ಚಿಸುವುದರಲ್ಲಿ ಇಲ್ಲ. ಹಣ ಎನ್ನುವುದು ನಿರ್ಮಾಪಕನಿಗೆ ಸಂಬಂಧಿಸಿದ್ದು, ಹಾಗಾಗಿ ಅದಕ್ಕೂ ಸೃಜನಶೀಲ ವಿಭಾಗಕ್ಕೂ ಸಂಬಂಧವಿಲ್ಲ ಎಂಬ ರಮ್ಯಕಲ್ಪನೆಯೊಂದು ನಮ್ಮಲ್ಲಿದೆ. ಆದರೆ ಅವೆರಡೂ ಒಂದಕ್ಕೊಂದು ಪೂರಕ, ಒಂದು ಇನ್ನೊಂದರ ಮೇಲೆ ಗಾಢವಾಗಿ ಪರಿಣಾಮ ಬೀರುತ್ತದೆ. ಹಾಗಾಗಿ ನಿರ್ಮಾಣಪ್ರಕ್ರಿಯೆಯಲ್ಲಿ ವೃತ್ತಿಪರತೆ ಬಂದರೆ, ಬರಹಗಾರರಿಗೆ, ಕಲಾವಿದರಿಗೆ, ತಂತ್ರಜ್ಞರಿಗೆ ಗೌರವಯುತವಾದ ಸಂಭಾವನೆಯನ್ನು ನಿಗದಿತ ಕಾಲದಲ್ಲಿಯೇ ಸಲ್ಲುವ ವ್ಯವಸ್ಥೆ ಬಂದರೆ ಖಂಡಿತವಾಗಿಯೂ ಅದು ಚಿತ್ರದ ಮೇಲೆ ಪ್ರಭಾವ ಬೀರಿಯೇ ಬೀರುತ್ತದೆ.

ಗಾಂಧಿನಗರದಲ್ಲಿ ಸಾಮಾನ್ಯವಾಗಿ ಕೇಳುತ್ತಲೇ ಇರುವ, 'ಸಿನಿಮಾ ಜನ ಕೆಲಸ ಮಾಡಿಸ್ಕೋತಾರೆ, ದುಡ್ ಕೊಡಲ್ಲ' ಎಂಬ ಮಾತಿನಲ್ಲಿ ಇರುವುದು ಆ ವ್ಯಕ್ತಿಯ ವೈಯಕ್ತಿಕ ನೋವಷ್ಟೇ ಅಲ್ಲ, ಚಿತ್ರರಂಗದ ಒಟ್ಟಾರೆ ಬೆಳವಣಿಗೆಗೂ ಮಾರಕವಾಗಿರುವ ಕಾಯಿಲೆಯೊಂದರ ಸೂಚನೆಯೂ ಹೌದು. ಆದರೆ ಈ ಬಗ್ಗೆ ಗಂಭೀರವಾಗಿ, ಗಟ್ಟಿಯಾಗಿ ಮಾತನಾಡುವವರು ಯಾರು?